**b. ಗಣೇಶನು ಏನು ಮಾಡಬಹುದಿತ್ತು? ಎರಡು ಸಲಹೆ ಕೊಡು.**

**c. i) ನೀನು ಗಣೇಶನ ಗೆಳೆಯ, ಆತನ ವಿಷಯವೆಲ್ಲಾ ನಿನಗೆ ತಿಳಿದಿದೆ. ಹಾಗಾದರೆ ಅವನಿಗೆ ನಿನ್ನ ಬುದ್ದಿವಾದ ಏನು?**

**ii) ಮಾಧ್ಯಮಗಳನ್ನು ನಾವು ಏಕೆ ಮಿತವಾಗಿ ಬಳಸಬೇಕು?**

2. ಅಪರ್ಣಾ ಎಂಟನೇ ತರಗತಿಯ ವಿದ್ಯಾರ್ಥಿನಿ ತನ್ನ ಅಜ್ಜಿಯೊಂದಿಗೆ ವಾಸಿಸುತ್ತಿದ್ದಳು. ಆಕೆಗೆ ಎಂದೂ ತನ್ನ ತಾಯಿಯಂದಿರ ಪ್ರೀತಿ ದೊರಕಿರಲಿಲ್ಲ. ಆಕೆ ತರಗತಿಯಲ್ಲಿ ಎಲ್ಲಾ ವಿಷಯಗಳಲ್ಲೂ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದಳು. ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆಯುತ್ತಿದ್ದಳು. ಆದರೆ ಆಕೆಯ ಅಂತರಾಳದಲ್ಲಿ ತನಗೆ ಯಾರೂ ಇಲ್ಲವೆಂಬ ಭಾವನೆ ಸದಾ ಕಾಡುತ್ತಿತ್ತು. ಈ ಭಾವನೆಯಿಂದ ಹೊರಬರಲಾಗದೆ, ಯಾರಲ್ಲೂ ಹೇಳಿಕೊಳ್ಳಲು ಆಗದೆ ಮನಃನೊಂದು ಒಂದು ದಿನ ಆಕೆ ನಿದ್ರೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದಳು. ಆದರೆ ಆಕೆಯ ಪ್ರಯತ್ನ ಸಫಲವಾಗಲಿಲ್ಲ. ಆಕೆ ಬದುಕುಳಿದಳು.

**a. i) ಒಬ್ಬ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿ ಅಪರ್ಣಾ ಮಾಡಿದ್ದು ಸರಿಯೇ?**

**ii) ಏಕೆ?**

**b. ಅಪರ್ಣಾಳಿಗೆ ನಿನ್ನ ಸಲಹೆ ಏನು? ವಿವರಿಸು.**

**c. "ಮಾನವ ಜೀವ ದೇವರು ಕೊಟ್ಟ ಅಮೂಲ್ಯ ಕೊಡುಗೆ" ಎಂದು ಇತರರು ಅರಿತುಕೊಳ್ಳಲು ಅವರಿಗೆ ನೀನು ಹೇಗೆ ವಿವರಿಸುವಿ?**

3. ದೀಪಾ ಹತ್ತನೇ ತರಗತಿಯ ವಿದ್ಯಾರ್ಥಿನಿ. ಈಕೆ ಕಲಿಕೆಯಲ್ಲಿ ಯಾವಗಲೂ ಮುಂದು. ಈ ಬಗ್ಗೆ ಆಕೆಗೆ ಜಂಭವೂ ಇತ್ತು. ಆಕೆ ಓದುವುದನ್ನು ಕಡಿಮೆ ಮಾಡಿದಳು. ತುಂಬಾ ಹೊತ್ತು ಮೊಬೈಲ್ ವೀಕ್ಷಿಸುವ ಅಭ್ಯಾಸ ಬೆಳೆಸಿಕೊಂಡಳು. ದೀಪಾ ಪರೀಕ್ಷೆಯಲ್ಲಿ ಅನುತ್ತೀರ್ಣಳಾದಳು. ತಾಯಿ ಗದರಿದಾಗ ನಾನು ಮೊಬೈಲ್ ನೋಡಿದ ಕಾರಣ ಅನುತ್ತೀರ್ಣಳಾದುದಲ್ಲ. ಪರೀಕ್ಷೆಗೆ ಕೇಳಿದ ಪ್ರಶ್ನೆಗಳೇ ಸರಿ ಇರಲಿಲ್ಲ.

**a. i) ದೀಪಾ ಕೊಟ್ಟ ಕಾರಣ ಸರಿಯೇ?**

**ii) ಏಕೆ?**

**b. i) ದೀಪಾ ಮಾಡಿದ ತಪ್ಪು ಏನು?**

**ii) ದೀಪಾಳಿಗೆ ನಿನ್ನ ಸಲಹೆ ಏನು?**

**c. "ವಿದ್ಯೆಯ ಜೊತೆಗೆ ನಾವು ಮಾಡಬೇಕಾದ ಇತರ ಮೌಲ್ಯಧರಿತ ಕೆಲಸಗಳು" – ಎರಡು ವಾಕ್ಯಗಳಲ್ಲಿ ವಿವರಿಸು.**



## ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

### ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 07-01-2023** **ಸಮಯ : 2½ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ಸಮಯ ನಮ್ಮ __________ ಅದನ್ನು ನಮ್ಮಿಂದ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ.
(ಸಂತೋಷ; ಆಭರಣ; ಆಸ್ತಿ)
2. ________ ಒಬ್ಬ ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ಚಾಲನೆ ನೀಡುತ್ತದೆ.
(ದೀನತೆ; ಸಂವೇದನೆ; ಅಹಂಕಾರ)
3. ಒಳ್ಳೆಯ ಮತ್ತು ಕ್ರಿಯಾತ್ಮಕ ಮುಖಂಡನಿಗೆ ತನ್ನ ವೃತ್ತಿಯ ಬಗ್ಗೆ ಸಂಪೂರ್ಣ __________ ಇರಬೇಕು.
(ಜ್ಞಾನ ಮತ್ತು ಪರಿಣಿತಿ; ಆಸ್ತಿ ಮತ್ತು ಅಂತಸ್ತು; ಆಲೋಚನೆ ಮತ್ತು ಅಭಿಪ್ರಾಯ)
4. ಪ್ರತಿ ಮಾನವ ಜೀವಿಗೆ ಘನತೆಯಿಂದ ಜೀವಿಸಲು _________ ಅಗತ್ಯ.
(ಸಂತೋಷ; ಮಾನವ ಹಕ್ಕುಗಳು; ಅಭಿಲಾಷೆಗಳು)
5. ______ ನಮ್ಮನ್ನು ನಮ್ಮೊಂದಿಗೆ ಮತ್ತು ಇತರರೊಂದಿಗೆ ಮುಕ್ತ ಮನಸ್ಸುಳ್ಳವರಾಗಿರಲು ಕರೆ ಕೊಡುತ್ತದೆ.
(ಸಾಮಾಜಿಕ ಪರಿಜ್ಞಾನ; ಸಂವೇದನ ಶೀಲತೆ; ದೀನತೆ)
6. __________ ಇವೆರಡು ಗೆಳೆತನದ ಎರಡು ಕಂಬಗಳು.
(ಪ್ರೀತಿಸುವುದು ಮತ್ತು ಹಂಚುವುದು; ಹೊಗಳಿಕೆ ಮತ್ತು ತೆಗಳಿಕೆ; ಹೊಗಳಿಕೆ ಮತ್ತು ಪ್ರೋತ್ಸಾಹ)
7. _________ ಗಳನ್ನು ಕಂಡುಕೊಳ್ಳುವ ನಿಪುಣತೆಯೆ ನೈತಿಕ ಬಲ.
(ಸರಿ ಮತ್ತು ತಪ್ಪು; ದು:ಖ ಮತ್ತು ಸಂತೋಷ; ಮೌಲ್ಯ ಮತ್ತು ವ್ಯವಹಾರ)
8. ಸಾರ್ವತ್ರಿಕವಾದ ಎಂದರೆ ಇತರರ _______________ ಯನ್ನು ಗೌರವಿಸುವುದು ಎಂದು ಅರ್ಥ.
(ವ್ಯಕ್ತಿಗೌರವ; ಹಕ್ಕು ಬಾದ್ಯತೆ; ಸಂಪ್ರದಾಯ ಸಂಸ್ಕೃತಿ)

9. ಒಂದು ವರ್ಷಕ್ಕೆ ಬೆಲೆ ಕಟ್ಟಲು ಒಬ್ಬ ________________ ಯನ್ನು ಕೇಳಿ.
(ತಾಯಿ; ನ್ಯಾಯವಾದಿ; ವಿದ್ಯಾರ್ಥಿ)

10. ಗೆಳೆತನವು ನಮ್ಮ ಜೀವನಕ್ಕೆ ____________ ಕೊಡುತ್ತದೆ.
(ಗೌರವವನ್ನು; ಪ್ರೀತಿಯನ್ನು; ಅರ್ಥವನ್ನು)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ಯಾವುದೇ ಸಮಾಜವಾಗಲಿ ಅದು __________ ವ್ಯವಸ್ಥೆಯಿಂದ ಸ್ಥಾಪಿತವಾಗಿರುತ್ತದೆ.
2. __________ ಒಬ್ಬ ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ಚಾಲನೆ ಕೊಡುತ್ತದೆ.
3. ವೈವಿಧ್ಯತೆ ಜೀವನಕ್ಕೆ _________ವನ್ನು ತರುತ್ತದೆ.
4. _______ ಯೊಂದಿಗೆ ಜೀವಿಸುವುದು ಮಾನವ ಅಭಿಲಾಷೆಯ ಅಂತಿಮ ಗುರಿಯಾಗಿದೆ.
5. __________ ಒಂದು ಅಪರೂಪದ ಸಂಪನ್ಮೂಲ.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಓದಲು ಸಮಯವಿರಲಿ : **ಅದು ಸುಜ್ಞಾನದ ಬುಗ್ಗೆ** :: ನಗಲು ಸಮಯವಿರಲಿ : ________
2. ನಿನ್ನೆ ಎಂಬುದು : **ರದ್ದುಮಾಡಿದ ಚೆಕ್ಕು** :: ಇಂದು ಎಂಬುದು : _________
3. ಮಾತನಾಡುವ ಮೊದಲು : **ಆಲಿಸು** :: ಟೀಕಿಸುವ ಮೊದಲು : ________.
4. ಅತ್ಯುತ್ತಮ ಆಭರಣ : **ದೀನತೆ** :: ಸಂಪದ್ಭರಿತ ಐಶ್ವರ್ಯ : ________.
5. ಡಾ॥ ಅಂಬೇಡ್ಕರ್ : **ಸ್ವಯಂಕೃತ ವ್ಯಕ್ತಿ** :: ಮದರ್‌ತೆರೇಜಾ : ________

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ಪರ ಸಂವೇದನಾ ಶೀಲತೆ ಎಂದರೇನು?
3. ಸಮಯ ಎಂದರೆ ಏನು?
4. ಯಾವ ದುರ್ಗುಣಗಳು ಗೆಳೆತನವನ್ನು ನಾಶಗೊಳಿಸುತ್ತದೆ?
5. ಸಾರ್ವತ್ರಿಕ ವಾದ ಎಂದರೇನು?.

**V. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸಂವೇದನಾ ಶೀಲತೆಯಲ್ಲಿ ಬೆಳೆಯುವ ಅಗತ್ಯವೇನು?
2. ಗೆಳೆತನವನ್ನು ಹೇಗೆ ಬೆಳೆಸಿಕೊಳ್ಳುತ್ತಿ?
3. ದೀನತೆಯನ್ನು ನಾವು ಏಕೆ ಸುಗುಣವೆನ್ನುತ್ತೇವೆ?



4. ಮುಖಂಡತ್ವದ ಅಗತ್ಯ ಲಕ್ಷಣಗಳಾವುವು?
5. ಸಾಮಾಜಿಕ ಪರಿಜ್ಞಾನದ ತೋರಿಕೆಗಳನ್ನು ಪಟ್ಟಿ ಮಾಡಿ.
6. ನಿನ್ನ ಗೆಳೆತನದಲ್ಲಿ ಏನನ್ನು ಪ್ರಮುಖವೆಂದು ಪರಿಗಣಿಸಿತ್ತಿ?

**VI.ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ನಾಲ್ಕು ವಿಧದ ಜನನವನ್ನು ಬರೆದು ಅವುಗಳನ್ನು ನಿನ್ನ ಸ್ವಂತ ಮಾತಿನಲ್ಲಿ ವಿವರಿಸು.
2. ಶಾಲಾ ವಿಧ್ಯಾರ್ಥಿಗಳು ಸಮಯವನ್ನು ಸಾಮಾನ್ಯವಾಗಿ ಪೋಲು ಮಾಡುವ ಕಾರಣಗಳನ್ನು ಪಟ್ಟಿ ಮಾಡಿ ಬರೆ.
3. ಸ್ವಯಂ, ಪರ ಮತ್ತು ಸಮಾಜ ಸಂವೇದನೆಯಲ್ಲಿ ಬೆಳೆಯಲು ನೀನೇನು ಮಾಡಬೇಕು?
4. ಗೆಳೆತನವನ್ನು ಬೆಳೆಸಿಕೊಳ್ಳಲು ಅಗತ್ಯ ಗುಣಲಕ್ಷಣಗಳಾವುವು?
5. ಈ ಪ್ರಪಂಚದಲ್ಲಿ ಬಾಳಲು ನಿನಗೆ ಅವಕಾಶ ಮಾಡಿಕೊಟ್ಟ ಅದ್ಭುತಕರ ಅವಕಾಶಕ್ಕೆ ನೀನು ನಿನ್ನ ಪೋಷಕರಿಗೆ ಕೃತಜ್ಞನಾಗಿದ್ದೀಯಾ?
6. ಮುಖಂಡನ ಅಪೇಕ್ಷಿತ 6 ಗುಣಗಳನ್ನು ಪಟ್ಟಿಮಾಡು.
7. ನಿನ್ನ ಬಿಡುವಿನ ಸಮಯವನ್ನು ಅರ್ಥಭರಿತವಾಗಿ ಹೇಗೆ ವ್ಯಯಮಾಡುತ್ತಿ?

**VII. ಯಾವುದಾದರೂ ಒಂದು ವಿಷಯದ ಬಗ್ಗೆ ವಿವರಿಸಿ ಬರೆಯಿರಿ: 1x5=5**

1. ವ್ಯಕ್ತಿತ್ವ ವಿಕಸನ
2. ವಿದ್ಯೆಯ ಮಹತ್ವ
3. ಸಮಯ ಪ್ರಜ್ಞೆ

**VIII. ಯಾವುದಾದರೂ ಎರಡು ಪ್ರಶ್ನೆಗಳಿಗೆ ನಿಮ್ಮ ಸ್ವಂತ ವಾಕ್ಯದಲ್ಲಿ ಉತ್ತರ ಬರೆಯಿರಿ: 2x5=10**

1. ರಾಷ್ಟ್ರೀಯ ಭಾವೈಕ್ಯತೆ.
2. ಸಂಪ್ರದಾಯ ಮತ್ತು ಮೂಢ ನಂಬಿಕೆಗಳು.
3. ಈ ಕೆಳಗಿನ ಮೌಲ್ಯಗಳ ಬಗ್ಗೆ ನಿಮ್ಮ ಸ್ವಂತ ವಾಕ್ಯದಲ್ಲಿ ಉದಾಹರಣೆ ಸಹಿತ ವಿವರ ನೀಡಿರಿ:

   a) ಪ್ರಾಮಾಣಿಕತೆ b) ಇತರರಿಗೆ ಸಹಾಯ ಮಾಡುವುದು c) ಶಿಸ್ತು ಪರಿಪಾಲನೆ

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಗಣೇಶನು ಹತ್ತನೇ ತರಗತಿಯ ವಿದ್ಯಾರ್ಥಿ. ಶಾಲೆಯಲ್ಲಿ ಮೊಬೈಲ್ ಬಳಕೆ ನಿಷೇಧವೆಂದು ತಿಳಿದಿದ್ದರೂ ಆತನು ಮೊಬೈಲ್ ತಂದಿದ್ದನು. ತರಗತಿಯಲ್ಲಿ ಮೊಬೈಲ್ ಧ್ವನಿ ಶಿಕ್ಷಕರ ಕಿವಿಗೆ ಬಿತ್ತು. ಶಿಕ್ಷಕರು ಕೇಳಿದಾಗ ಯಾರೂ ತಮ್ಮಲ್ಲಿ ಇದೆ ಎಂದು ಒಪ್ಪಿಕೊಳ್ಳಲಿಲ್ಲ. ಗಣೇಶನೂ ತನ್ನಲ್ಲಿ ಮೊಬೈಲ್ ಇಲ್ಲ ಎಂದನು. ಎಲ್ಲರ ಚೀಲ ಪರೀಕ್ಷಿಸಿದಾಗ, ಗಣೇಶನ ಚೀಲದಲ್ಲಿ ಮೊಬೈಲ್ ಸಿಕ್ಕಿತು.

   **a. i) ಗಣೇಶನು ಮಾಡಿದ್ದು ಸರಿಯೇ?**

   **ii) ಏಕೆ?**